ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ಸಂಪುಟ –೧೫೮	ಬೆಂಗಳೂರು, ಶುಕ್ರವಾರ, ೨೩, ಜೂನ್, ೨೦೨೩(ಆಷಾಢ, ೦೨, ಶಕವರ್ಷ, ೧೯೪೫)	ಸಂಚಿಕೆ ೧೨೨
Volume - 158	BENGALURU, FRIDAY, 23, JUNE, 2023(ASHADHA, 02, SHAKAVARSHA, 1945)	Issue 122

ಭಾಗ ೧

ರಾಜ್ಯ ಸರ್ಕಾರದ ಮುಖ್ಯ ಆದೇಶಗಳು ಹಾಗೂ ಸುತ್ತೋಲೆ ಮುಂತಾದ ಎಲ್ಲಾ ಇಲಾಖೆಗಳಿಗೂ ಸಂಬಂಧಿಸಿದ ಆದೇಶಗಳು

ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: "HIT & Run" ಅಪಘಾತಗಳಲ್ಲಿ ಮರಣ ಹೊಂದಿದವರಿಗೆ ಮತ್ತು ಗಾಯಗೊಂಡವರಿಗೆ ಪರಿಹಾರ ನೀಡಲು ಅನುಷ್ಠಾನ ಮಾಡಿರುವ ಯೋಜನೆಗಾಗಿ ಜಿಲ್ಲಾ ಸಮಿತಿ ರಚಿಸುವ ಕುರಿತು.

ಓದಲಾಗಿದೆ: ಆಯುಕ್ತರು, ಕರ್ನಾಟಕ ರಾಜ್ಯ ರಸ್ತೆ ಸುರಕ್ಷತಾ ಪ್ರಾಧಿಕಾರ ಇವರ ಪತ್ರ ಸಂಖ್ಯೆ: ಕರಾರಸುಪ್ರಾ/ವಿವ-17/2020-17, ದಿನಾಂಕ 07/06/2023.

ಪ್ರಸ್ತಾವನೆ:

ಮೇಲೆ ಓದಲಾದ ಆಯುಕ್ತರು, ಕರ್ನಾಟಕ ರಾಜ್ಯ ರಸ್ತೆ ಸುರಕ್ಷತಾ ಪ್ರಾಧಿಕಾರ ಇವರ ಪತ್ರದಲ್ಲಿ, ಸಾರಿಗೆ ಮತ್ತು ಹೆದ್ದಾರಿಗಳ ಮಂತ್ರಾಲಯದ ದಿನಾಂಕ 25/02/2022ರ ಅಧಿಸೂಚನೆಯಲ್ಲಿ, ''compensation to victims of Hit and Run Motor Accidents Scheme"ನ್ನು ಪ್ರಕಟಿಸಲಾಗಿರುತ್ತದೆ. ದಿನಾಂಕ 01/04/2022 ರಿಂದ ಸದರಿ ಯೋಜನೆಯು ಜಾರಿಗೆ ಬಂದಿದ್ದು, ಸದರಿ ಯೋಜನೆಯಡಿ "Hit and Run" ಅಪಾಘತದಲ್ಲಿ ಮರಣ ಹೊಂದಿದ ವಾರಸುದಾರರಿಗೆ ರೂ.2.00/-ಲಕ್ಷಗಳು ಹಾಗೂ ಗಾಯಗೊಂಡವರಿಗೆ ರೂ.50,000/-ಗಳನ್ನು ಪರಿಹಾರವನ್ನು ನೀಡಲು ಉದ್ದೇಶಿಸಲಾಗಿರುತ್ತದೆ. ಆದುದರಿಂದ, "compensation to victims of Hit and Run Motor Accidents Scheme" ನ್ನು ಅನುಷ್ಠಾನಗೊಳಿಸಲು ಹಾಗೂ ಜವಾಬ್ದಾರಿ ಮತ್ತು ಕರ್ತವ್ಯಗಳನ್ನು ನಿರ್ವಹಿಸಲು ಜಿಲ್ಲಾ ಮಟ್ಟದ ಸಮಿತಿಯನ್ನು ರಚಿಸುವಂತೆ ಸೂಚಿಸಿರುವ ಹಿನ್ನೆಲೆಯಲ್ಲಿ, ಅಧಿಕಾರಿ/ ಸದಸ್ಯರುಗಳ ಪಟ್ಟಿಯೊಂದಿಗೆ ಸದರಿ ಸಮಿತಿಯನ್ನು ರಚಿಸುವಂತೆ ಕೋರಿರುತ್ತಾರೆ.

ಆಯುಕ್ತರು, ಕರ್ನಾಟಕ ರಾಜ್ಯ ರಸ್ತೆ ಸುರಕ್ಷತಾ ಪ್ರಾಧಿಕಾರ ಇವರ ಪ್ರಸ್ತಾವನೆಯನ್ನು ಪರಿಶೀಲಿಸಿ, "compensation to victims of Hit and Run Motor Accidents Scheme" ನ್ನು ಅನುಷ್ಠಾನಗೊಳಿಸಲು ಹಾಗೂ ಜವಾಬ್ದಾರಿ ಮತ್ತು ಕರ್ತವ್ಯಗಳನ್ನು ನಿರ್ವಹಿಸಲು ಸಮಿತಿಯನ್ನು ಈ ಕೆಳಕಂಡಂತೆ ರಚಿಸಿ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಟಿಡಿ 94 ಟಿಡಿಒ 2023,
ಬೆಂಗಳೂರು ದಿನಾಂಕ:21/06/2023.

ಪ್ರಸ್ತಾವನೆಯಲ್ಲಿ ವಿವರಿಸಿರುವಂತೆ, "compensation to victims of Hit and Run Motor Accidents Scheme" ನ್ನು ಅನುಷ್ಠಾನಗೊಳಿಸಲು ಈ ಕೆಳಕಂಡಂತೆ ಜಿಲ್ಲಾ ಮಟ್ಟದ ಸಮಿತಿಯನ್ನು ರಚಿಸಿ ಆದೇಶಿಸಿದೆ.

R.N.I. No. KARBIL/2001/47147 POSTAL REGN. No. RNP/KA/BGS/2202/2017-19
Licensed to post without prepayment WPP No. 297

1.	Claims Settlement Commissioner – ಜಿಲ್ಲಾಧಿಕಾರಿ	ಅಧ್ಯಕ್ಷರು
2.	Claims Enquiry Officer – ಉಪ ವಿಭಾಗಾಧಿಕಾರಿಗಳು / ತಹಶೀಲ್ದಾರ್	ಸದಸ್ಯರು
3.	ಜಿಲ್ಲಾ ಪೊಲೀಸ್ ಅಧೀಕ್ಷಕರು / ಪೊಲೀಸ್ ಉಪಾಧೀಕ್ಷಕರು (H/Q)	ಸದಸ್ಯರು
4.	ಜಿಲ್ಲಾ ಶಸ್ತ್ರ ಚಿಕಿತ್ಸಕರು	ಸದಸ್ಯರು
5.	ಪ್ರಾದೇಶಿಕ ಸಾರಿಗೆ ಅಧಿಕಾರಿ	ಸದಸ್ಯರು
6.	ರಸ್ತೆ ಸುರಕ್ಷತೆಯ ಕ್ಷೇತ್ರದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಸ್ವಯಂ ಸೇವಾ ಸಂಸ್ಥೆಯ ಸದಸ್ಯ – ಜಿಲ್ಲಾಧಿಕಾರಿ ನಿರ್ಣಯಿಸಿದಂತೆ	ಸದಸ್ಯರು
7.	General Insurance Council (GIC) ನಾಮನಿರ್ದೇಶನ ಮಾಡಿರುವ ಅಧಿಕಾರಿ	ಸದಸ್ಯ ಕಾರ್ಯದರ್ಶಿ

ಸದರಿ ಸಮಿತಿಯು ಸಾರಿಗೆ ಮತ್ತು ಹೆದ್ದಾರಿಗಳ ಮಂತ್ರಾಲಯದ ಅಧಿಸೂಚನೆ ಸಂಖ್ಯೆ: G.S.R.163(E), ದಿನಾಂಕ: 25/02/2022ರ ಅಧಿಸೂಚನೆಯ ಜವಾಬ್ದಾರಿ ಮತ್ತು ಮತ್ತು ಕರ್ತವ್ಯಗಳನ್ನು ನಿರ್ವಹಿಸತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಪುಷ್ಪ ವಿ.ಎಸ್.)
ಸರ್ಕಾರದ ಅಧೀನ ಕಾರ್ಯದರ್ಶಿ,
ಸಾರಿಗೆ ಇಲಾಖೆ.

PR-317

ಮುದ್ರಕರು ಹಾಗೂ ಪ್ರಕಾಶಕರು:– ಸಂಕಲನಾಧಿಕಾರಿಗಳು, ಕರ್ನಾಟಕ ರಾಜ್ಯಪತ್ರ, ಸರ್ಕಾರಿ ಕೇಂದ್ರ ಮುದ್ರಣಾಲಯ, ಬೆಂಗಳೂರು

S VISWANATH
Digitally signed by S VISWANATH
Date: 2023.06.23 17:21:20 +05'30'